**ಸಾಕ್ಷಿಯನ್ನು ದಿಃ 12.10.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ವಾದಿ ನನ್ನ ಚಿಕ್ಕಮ್ಮ ಇವರು ನನಗೆ ನೀಡಿರುವ ಎಸ್.ಪಿ.ಎ ಯ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 9 ಎಂದು ಗುರುತಿಸಲಾಯಿತು. ಆದುದರಿಂದ ನಾನು ಕೋರಿರುವಂತೆ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ವಾದಿ ನನಗೆ ಚಿಕ್ಕಮ್ಮನಾಗಬೇಕು. ಸದರಿಯವರಿಗೆ 93 ವರ್ಷ ವಯಸ್ಸು. ಸದರಿಯವರು ಹಾಸಿಗೆ ಹಿಡಿದಿದ್ದು ಆರೋಗ್ಯವಾಗಿರುವುದಿಲ್ಲ. ವಾದಿ ಆರೋಗ್ಯವಾಗಿಲ್ಲದೇ ಹಾಸಿಗೆ ಹಿಡಿದಿದ್ದಾರೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. HRC ಪ್ರಕರಣದಲ್ಲಿ ವಿಚಾರಣೆಯಾಗಿ ಆಸ್ತಿಯ ಸ್ವಾದೀನತೆಯನ್ನು ನಾನೇ ಪಡೆದುಕೊಂಡಿರುತ್ತೇನೆ. ನಿಪಿ. 9 ಅನ್ನು HRC ಪ್ರಕರಣ ಮಾತ್ರ ನಡೆಸಲು ಎಸ್.ಪಿ.ಎ ಕೊಟ್ಟಿರುತ್ತಾರೆ ಬೇರೆ ಪ್ರಕರಣ ನಡೆಸಲು ಜಿ.ಪಿ.ಎ ಕೊಟ್ಟಿರುವುದಿಲ್ಲ ಎಂದರೆ ಸರಿ. ವಾದಿಯು ಈ ದಾವೆ ನಡೆಸಲು ನನಗೆ ಜಿ.ಪಿ.ಎ ನೀಡಿರುವುದಿಲ್ಲ ಎಂದರೆ ಸರಿ. ವಾದಿಯು ನನಗೆ ಈ ದಾವೆ ನಡೆಸಲು ಜಿ.ಪಿ.ಎ ನೀಡದೇ ಇರುವ ಕಾರಣ ನಾನು ಸಾಕ್ಷಿ ನುಡಿಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ವಾದಿಯು ದಾವ ಆಸ್ತಿ ನನಗೆ ಪರಭಾರೆ ಮಾಡಿರುವುದಿಲ್ಲ ಎಂದರೆ ಸರಿ. ಶಾರದಮ್ಮ ಎನ್ನುವವರು ನಮ್ಮ ವಿರುದ್ಧ ಓ.ಎಸ್. 1057/2012 ರಂತೆ ವಿಭಾಗ ಕೋರಿ 2 ನೇ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ಶಾರದಮ್ಮ ನನ್ನ ಅಣ್ಣ ಮುಕುಂದನ ಹೆಂಡತಿ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ಪ್ರತಿವಾದಿ ಮುಕುಂದರವರಿಂದ ಬಾಡಿಗೆಗೆ ಪಡೆದುಕೊಂಡಿದ್ದರು ಎಂದರೆ ಸರಿ. ಮೊದಲು ದಾವ ಸ್ವತ್ತಿಗೆ ಮುಕುಂದ ರವರೇ ಮಾಲೀಕರಾಗಿದ್ದರು ಎಂದರೆ ಸರಿ. ವಾದಿ ಲಲಿತಮ್ಮ ಮುಕುಂದರವರ ಅಕ್ಕ. ಶಾರದಮ್ಮ ರವರು ಮುಕುಂದರವರ ಹೆಂಡತಿ ಎಂದು ಹೇಳಿ ದಾವೆ ಹೂಡಿದ್ದಾರೆ ಎಂದರೆ ಸಾಕ್ಷಿಯು ಅವರು ಆ ರೀತಿ ಹೇಳಿಕೊಂಡಿದ್ದಾರೆ ಎಂದು ಉತ್ತರಿಸಿರುತ್ತಾರೆ. ಸದರಿ ದಾವೆಯಲ್ಲಿ ದಾವ ಸ್ವತ್ತಿಗೆ ಶಾರದಮ್ಮ ರವರು ಮಾಲೀಕರು ಎಂದು ಹಾಗೂ ವಾದಿಯವರು ತಾವು ಮಾಲೀಕರು ಎಂದು ಹೇಳಿರುತ್ತಾರೆ ಎಂದರೆ ಸರಿ. ಸದರಿ

ದಾವೆಯಲ್ಲಿ ಪ್ರತಿವಾದಿಗೆ ಬಾಡಿಗೆಗೆ ಕೊಟ್ಟಿರುವ ಮಳಿಗೆಯನ್ನು ಹೊರತು ಪಡಿಸಿ ಇನ್ನೂ ನಾಲ್ಕು ಮಳಿಗೆಗಳು ಮತ್ತು ಮನೆ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ ಲಲಿತಮ್ಮ ವಾಸವಾಗಿದ್ದಾರೆ ಎಂದರೆ ಸರಿ. ಸದರಿ ಓ.ಎಸ್. ನಂ. 1057/2012 ರಲ್ಲಿ ಯಾರು ಮಾಲೀಕರು ಎಂದು ಇತ್ಯರ್ಥ ಆಗಿರುವುದಿಲ್ಲ ಎಂದರೆ ಸರಿ. ಸದರಿ ದಾವೆ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ನಾನು ವಾದಿಯವರ ಅಕ್ಕನಾದ ಸರ್ವಮಂಗಳ ರವರ ಮಗಳು. ಸದರಿ ಓ.ಎಸ್. ನಂ. 1057/2012 ರಲ್ಲಿ ನನ್ನ ತಾಯಿ ಸರ್ವಮಂಗಳ ರವರು ಪಕ್ಷಗಾರರಾಗಿದ್ದರು, ಅವರು ತೀರಿ ಹೋದ ನಂತರ ನಾವು ವಾರಸುದಾರರಾಗಿ ಬಂದಿರುತ್ತೇವೆ ಎಂದರೆ ಸರಿ.

ದಿಃ 22.04.2013 ರಂದು ಪ್ರತಿವಾದಿಗೆ ವಕೀಲರ ಮೂಲಕ ನೋಟೀಸ್ ಕಳುಹಿಸಿರುತ್ತೇವೆ ಎಂದರೆ ಸರಿ. ಸದರಿ ನೋಟೀಸ್ ನಲ್ಲಿ ಶಾರದರವರಿಗೆ ಯಾವುದೇ ಹಕ್ಕಿಲ್ಲ ನಾವೇ ವಾರಸುದಾರರು ಎಂದು ಹೇಳಿರುತ್ತೇನೆ ಎಂದರೆ ಸರಿ. ಬಾಡಿಗೆ ಕೊಡದೇ ಇದ್ದರೆ ನಾನು ಮನೆ ಖಾಲಿ ಮಾಡಿಸುತ್ತೇನೆಂದು ನೋಟೀಸ್ ಹೇಳಿರುತ್ತೇನೆ ಎಂದರೆ ಸಾಕ್ಷಿಯು ಅವರು ಬಾಡಿಗೆ ಕೊಡುತ್ತಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ನೋಟೀಸಿಗೆ ಪ್ರತಿವಾದಿಯು ಓ.ಎಸ್. 1057/2012 ವಿಚಾರಣೆಗೆ ಬಾಕಿ ಇದ್ದು ಮಾಲೀಕರು ಯಾರ ಎಂದು ತೀರ್ಮಾನ ಆದ ಮೇಲೆ ಮಾಲೀಕರಿಗೆ ಬಾಡಿಗೆ ಕೊಡುತ್ತೇನೆಂದು ಪ್ರತ್ಯುತ್ತರ ನೋಟೀಸ್ ಕಳುಹಿಸಿರುತ್ತೇನೆ ಎಂದರೆ ಸರಿ. ಮುಕುಂದ ರವರಿಂದ ಪ್ರತಿವಾದಿ ಮಳಿಗೆಯನ್ನು 1975 ರಲ್ಲಿ ಬಾಡಿಗೆಗೆ ಪಡೆದುಕೊಂಡಿದ್ದರು ಎಂದರೆ ಗೊತ್ತಿಲ್ಲ. ಮುಕುಂದ ಜೀವಂತ ಇರುವವರೆಗೂ ಪ್ರತಿವಾದಿ 800/- ರುಪಾಯಿ ಬಾಡಿಗೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು 3,000/- ರುಪಾಯಿ ಬಾಡಿಗೆ ಕೊಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಆ ಬಗ್ಗೆ ದಾಖಲೆ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. HRC ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೆನೆ ಎಂದು ಉತ್ತರಿಸಿರುತ್ತಾರೆ. ಮುಕುಂದರವರು ತೀರಿ ಹೋದ ನಂತರ ನಾನೇ ಮಾಲೀಕಳು ಎಂದು ಪ್ರತಿವಾದಿಯವರಿಂದ ದೌರ್ಜನ್ಯದಿಂದ ಅರ್ಧ ಮಳಿಗೆಯನ್ನು ವಶಪಡಿಸಿಕೂಂಡು 50,000/- ರುಪಾಯಿ ಮುಂಗಡ ಹಣ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮುಂದುವರೆದು 30,000/- ಮುಂಗಡ ಪಡೆದುಕೊಂಡಿದ್ದೆ ಎಂದು ಉತ್ತರಿಸಿರುತ್ತಾರೆ. ಅರ್ಧ ಮಳಿಗೆಯನ್ನು ಬೇರೆಯವರಿಗೆ ಬಾಡಿಗೆಗೆ ಕೊಟ್ಟಿರುತ್ತೇನೆ ಎಂದರೆ

ಸಾಕ್ಷಿಯು ಪ್ರತಿವಾದಿಯೇ ಸ್ವಇಚ್ಛೆಯಿಂದ ಅರ್ಧ ಮಳಿಗೆಯನ್ನು ಬಿಟ್ಟುಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಅರ್ಧ ಮಳಿಗೆಯನ್ನು ಟೀ ಶಾಪ್ ರವರಿಗೆ ಬಾಡಿಗೆಗೆ ಕೊಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಮ್ಮ ವ್ಯಾಜ್ಯ ಆಗಬಾರದು ಎಂದು ಪ್ರತಿವಾದಿ ಅರ್ಧ ಮಳಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಯಾವ ಮನಸ್ಸಿನಿಂದ ಬಿಟ್ಟುಕೊಟ್ಟಿರುತ್ತಾರೋ ಗೊತ್ತಿಲ್ಲ ಒಟ್ಟಿನಲ್ಲಿ ಬಿಟ್ಟುಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಜೂನ್ 2011 ರಂದು ಪ್ರತಿವಾದಿ ಅರ್ಧ ಮಳಿಗೆಯನ್ನು ನನ್ನ ಸುರ್ಪದಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಉಳಿದ ಅರ್ಧ ಮಳಿಗೆಗೆ ಪ್ರತಿವಾದಿಯರಿಂದ ಹೊಸ ಬಾಡಿಗೆ ಕರಾರು ಮಾಡಿಸಿಕೊಂಡಿರುವುದಿಲ್ಲ. ಮುಂದುವರೆದು ಸಾಕ್ಷಿಯು ಹಳೆ ಬಾಡಿಗೆದಾರರಾದ ಕಾರಣ ಕರಾರು ಮಾಡಿಸಿಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. 800/- ರುಪಾಯಿ ಬಾಡಿಗೆಗೆ ನನ್ನ ಹಾಗೂ ಪ್ರತಿವಾದಿಯ ನಡುವೆ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಶಾರದಮ್ಮ ರವರು ಓ.ಎಸ್. 1057/2012 ರಲ್ಲಿ ದಾವೆ ಇತ್ಯರ್ಥ ಆಗುವವರೆಗೂ ಮಳಿಗೆಗಳು ಬಾಡಿಗೆಗೆ ಕೊಡಬಾರದು ಎಂದು ಮಧ್ಯಂತರ ಅರ್ಜಿ ಸಲ್ಲಿಸಿದ್ದು ಅದು ತೀರ್ಮಾನಕ್ಕೆ ಬಾಕಿ ಇದೆ ಎಂದರೆ ಸರಿ. ಸದರಿ ದಾವೆ ವಿಚಾರಣೆಗೆ ಬಾಕಿ ಇರುವ ಕಾರಣ ನಾನು ಬಾಡಿಗೆ ಅರಿಯರ್ಸ್ ಕೋರಿ ಈ ದಾವೆ ಹಾಕಲು ಬರುವುದಿಲ್ಲ ಎಂದರೆ ಸಾಕ್ಷಿಯು 2012 ರವರೆಗೂ ಪ್ರತಿವಾದಿ ಬಾಡಿಗೆ ನೀಡಿರುವ ಕಾರಣ ಈ ದಾವೆ ಹೂಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿ 2012 ರವರೆಗೂ ಬಾಡಿಗೆ ನೀಡಿರುತ್ತಾರೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

ಓ.ಎಸ್. ನಂ. 1057/2012 ದಾವೆಯನ್ನು 2012 ನೇ ಇಸವಿಯಲ್ಲಿ ಹಾಕಿದ್ದು ನಾನು HRC ದಾವೆಯನ್ನು 2013 ರಲ್ಲಿ ಹಾಕಿರುತ್ತೇನೆ ಎಂದರೆ ಸರಿ. ಸದರಿ HRC ದಾವೆಯಲ್ಲಿ ಪ್ರತಿವಾದಿಯು ಹಾಜರಾಗದೇ ಏಕಪಕ್ಷೀಯ ತೀರ್ಮಾನ ಆಗಿರುತ್ತದೆ ಎಂದರೆ ಸರಿ. HRC ಪ್ರಕರಣದಲ್ಲಿ ಶಾರದಮ್ಮ ರವರಿಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಯಾರು ಎಂದು ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. HRC ದಾವೆಯಲ್ಲಿ ಇತ್ಯರ್ಥ ಆದಂತೆ ಪ್ರತಿವಾದಿಯು ಮಳಿಗೆಯನ್ನು ನನ್ನ ಸುರ್ಪದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ. 4 ರಿಂದ 6 ದಾಖಲೆಗಳನ್ನು ಓ.ಎಸ್. 1057/2012 ರಲ್ಲಿಯೂ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ. 7 ರಿಂದ 13 ದಾಖಲೆಗಳನ್ನು ಮಳಿಗೆ ಲಲಿತಮ್ಮ ರವರಿಗೆ ಸೇರಿದ್ದು ಎಂದು ತೋರಿಸಲು

ಹಾಜರುಪಡಿಸಿರುತ್ತೇನೆ. ನಿಪಿ. 7 ಮತ್ತು 8 ರ ಡಿಮ್ಯಾಂಡ್ ನೋಟೀಸಿಗ ಅನುಗುಣವಾಗಿ ಕಂದಾಯ ಕಟ್ಟಿರುವುದಿಲ್ಲ. ಮುಂದುವರೆದು ಪ್ರತಿವಾದಿ ಬಾಡಿಗೆ ಕೊಡದೇ ಇರುವ ಕಾರಣ ಕಂದಾಯ ಕಟ್ಟಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಮೂರು ಮಳಿಗೆಯಲ್ಲಿ ಎರಡು ಮಳಿಗೆ ಖಾಲಿ ಇದ್ದು ಒಂದು ಮಳಿಗೆಯ ಮೇಲೆ ದಾವೆ ಇದೆ ಎಂದು ಉತ್ತರಿಸಿರುತ್ತಾರೆ. ಕಾರ್ಪೊರೇಷನ್ ರವರ ಜೊತೆ ಶಾಮಿಲಾಗಿ ನಿಪಿ. 7 ಮತ್ತು 8 ಅನ್ನು ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ದಾವೆ ವಿಚಾರಣೆಗೆ ಬಾಕಿ ಇರುವ ಕಾರಣ ಪ್ರತಿವಾದಿಯು ನನಗೆ ಬಾಡಿಗೆ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ. ದಿಃ 02.07.2021 ರಿಂದ ಪ್ರತಿವಾದಿ ಬಾಡಿಗೆ ನೀಡಿರುವುದಿಲ್ಲ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ಬಾಡಿಗೆ ನೀಡಿರುವುದಿಲ್ಲ ಹಾಗಾಗಿ ದಾಖಲೆ ಇಲ್ಲ ಎಂದು ಉತ್ತರಿಸಿರುತ್ತಾರೆ.

ದಿಃ 02.07.2021 ರಿಂದ ಹಿಂದಿನ ಬಾಡಿಗೆಯ ಅರಿಯರ್ಸ್ ಅನ್ನು ಬೇರೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಇರಬಹುದು. ನಾನು ಹೇಳಿದ ಹಾಗೆ ಪ್ರತಿವಾದಿಯು 57,000/- ಬಾಕಿ ಬಾಡಿಗೆ ಮತ್ತು 18% ಬಡ್ಡಿಯನ್ನು ಕೊಡಲು ಯಾವುತ್ತು ಒಪ್ಪಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರ ವಿರುದ್ಧ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.